## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 491/2023

**ಸಾಕ್ಷಿಯನ್ನು ದಿಃ 15.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಕುಮಾರ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 2 |
| ತಂದೆಯ ಹೆಸರು | ನಿಂಗಯ್ಯ | | |
| ವಯಸ್ಸು | 42 ವರ್ಷ | | |
| ಕೆಲಸ | ಕೂಲಿ ಕೆಲಸ | | |
| ವಾಸಸ್ಥಳ | ಕಲ್ಕುಣಿಕೆ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ-1 ನನ್ನ ತಂದೆ. ಚಾಸಾ-3 ನನ್ನ ಪತ್ನಿ. ಚಾಸಾ-4 ರಿಂದ 6 ಗೊತ್ತು. ನ್ಯಾಯಾಲಯದ ಮುಂದಿರುವ 1 ಮತ್ತು 3ನೇ ಆರೋಪಿತರು ಗೊತ್ತು. (**2ನೇ ಆರೋಪಿ ಗೈರು ಹಾಜರಿದ್ದು, ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ.**) ಸಾಕ್ಷಿ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ. ನಿಪಿ-2 ಕ್ಕೆ ನಾನು ಆಸ್ಪತ್ರೆಯಲ್ಲಿ ಸಹಿ ಹಾಕಿದ್ದೇನೆ. ಅದರಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ. ದಿಃ 15.07.2023 ರಂದು ಸಂಜೆ 4-30 ಗಂಟೆಗೆ ನಾನು ಕೆಲಸದಿಂದ ಬರುತ್ತಿದ್ದೆ. ನಾನು ಕಲ್ಕುಣಿಕೆ ಸರ್ಕಲ್ ನಲ್ಲಿ ಬರುತ್ತಿದ್ದಾಗ ನಾನು 1ನೇ ಆರೋಪಿಯ ಬಳಿ ಜಮೀನಿನ ಮಣ್ಣು ತೆಗೆದ ಬಗ್ಗೆ ಕೇಳಿದಾಗ 2ನೇ ಆರೋಪಿ ಹಿಂದುಗಡೆಯಿಂದ ಬಂದು ನನ್ನನ್ನು ತಬ್ಬಿ ಹಿಡಿದ. ಆಗ 3ನೇ ಆರೋಪಿ ಅಲ್ಲಿಗೆ ಬಂದು ಕಲ್ಲಿನಿಂದ ನನ್ನ ಎಡಭುಜಕ್ಕೆ ಮತ್ತು ತಲೆಯ ಎಡಭಾಗಕ್ಕೆ ಹೊಡೆದರು. ನಂತರ 3 ಜನ ಸೇರಿ ನನ್ನನ್ನು ಕೆಳಕ್ಕೆ ಹಾಕಿ ಚೆನ್ನಾಗಿ ಹೊಡೆದರು. ಆಗ ಸ್ವಲ್ಪ ಜನರು ಬಂದು ಗಲಾಟೆ ಬಿಡಿಸಿದರು. ನಂತರ ಪೋಲಿಸರು ಬಂದು ಆರೋಪಿತರನ್ನು ಕರೆದುಕೊಂಡುಹೋದರು. ನನ್ನನ್ನು ಬೇರೆಯವರು ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಪೋಲಿಸರು ಬಂದು ಬರೆದ

ಂಕೊಂಡು ಸಹಿ ಪಡೆದರು. ಆ ದಿನ ನನಗೆ ಹಲ್ಲೆ ಮಾಡಲು ಉಪಯೋಗಿಸಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ–1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ನಿಪಿ–2 ಕ್ಕೆ ಸಹಿಯನ್ನು ದಿಃ 15.07.2023 ರಂದು ಬೆಳಿಗ್ಗೆ 8 ಗಂಟೆಗೆ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಮಹಜರು ಮಾಡಿದಾಗ ಹಾಕಿದ್ದೇನೆ ಎಂದರೆ ಸರಿ. ಆಗ ಪೇಲಿಸರಿಗ ನಾನೇ ಘಟನಾ ಸ್ಥ,ಳವನ್ನು ತೋರಿಸಿದ್ದೇನೆ ಎಂದರೆ ಸರಿ. ಅಲ್ಲಿ ಚಾಸಾ–5 ಮತ್ತು 6 ರವರನ್ನು ಪೋಲಿಸರು ಪಂಚಸಾಕ್ಷಿದಾರರಾಗಿ ಕರೆಸಿಕೊಂಡರು ಎಂದರೆ ಸರಿ. ಅಲ್ಲಿ ಪೋಲಿಸರಿಗೆ ನಾನು ಒಂದು ಕಲ್ಲನ್ನು ತೋರಿಸಿ ಇದೇ ಕಲ್ಲಿನಿಂದ ಆರೋಪಿತರು ತನಗೆ ಹಲ್ಲೆ ಮಾಡಿರುವುದಾಗಿ ಹೇಳಿದೆ ಎಂದರೆ ಸರಿ. ಅಲ್ಲಿ ಪೋಲಿಸರು ನಿಪಿ–2ರ ಮಹಜುರನ್ನು ಬಬರೆದು ನನ್ನ, ಚಾಸಾ–5 ಮತ್ತು 6 ರವರ ಸಹಿಯನ್ನು ಪಡೆದು ಮು.ಮಾ–1ರ ಕಲ್ಲನ್ನು ಅಮಾನತ್ತುಪಡಿಸಿಕೊಂಡು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ನಿಪಿ–2ರ ಮಹಜರು ಮಾಡಿದರು ಎಂದರೆ ಸರಿ.

ದಿಃ 03.07.2023 ರಂದು ಸಂಜೆ 4–15 ರ ಸಮಯದಲ್ಲಿ ನಾನು ಕಲ್ಕುಣಿ ಕೆ ಸರ್ಕಲ್ ಬಳಿ ಇರುವ ಕೃಷ್ಣಪ್ಪ ರವರ ತೋಟದ ಗೇಟ್ ಹತ್ತಿರ ಇದ್ದಾಗ ಅಲಿಲಗೆ ಆರೋಪಿತರು ಬಂದು ಏಕಾಏಕಿ ನನಗೆ 1ನೇ ಆರೋಪಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. 1ನೇ ಆರೋಪಿ ನನ್ನನ್ನು ತಬ್ಬಿ ಹಿಡಿದುಕೊಂಡಾಗ 2ನೇ ಆರೋಪಿ ಕೈಯಿಂದ ನನ್ನ ಮೈಕೈಗೆ ಗುದ್ದಿದರು ಎಂದರೆ ಸರಿ. ಆಗ ಚಾಸಾ–3 ಮತ್ತು 4 ರವರು ಬಂದು ಗಲಾಟೆಯನ್ನು ಬಿಡಿಸಿ ಸಮಾಧಾನ ಮಾಡಿದರು ಎಂದು ಹೇಳಿದ್ದೇನೆ ಎಂದರೆ ಸರಿ. ಚಾಸಾ–3 ರವರು ಯಾವುದೋ ಒಂದು ಆಟೋದಲ್ಲಿ ನನ್ನನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ಸೇರಿಸಿದರು ಎಂದು ಹೇಳಿದ್ದೇನೆ ಎಂದರೆ ಸರಿ. ಆರೋಪಿತರು ನನ್ನ ಸಂಬಂಧಿಕರಾದ ಕಾರಣ ರಾಜಿ ಬರಲು ನಿರಾಕರಿಸಿದ್ದರಿಂದ ಚಾಸಾ–1

ರವರ ಮೂಲಕ ನಿಪಿ–1 ರ ದೂರನ್ನು ಕೊಡಲಾಗಿದೆ ಎಂದರೆ ಸರಿ. ನಾನು ಚಿಕಿತ್ಸೆಯಿಂದ ಬಿಡುಗಡೆಗೊಂಡು ಬಂದ ನಂತರ ಪೋಲಿಸರು ನಿಪಿ–2ರ ಮಹಜರು ಮಾಡಿ ಮು.ಮಾ–1ರ ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ. ಮೇಲೆ ಹೇಳಿದಂತೆ ಹೇಳಿಕೆಯನ್ನು ದಿಃ 15.07.2023 ರಂದು ಪೋಲಿಸ್ ಠಾಣೆಗೆ ಹೋಗಿ ತನಿಖಾಧಿಕಾರಿಯ ಮುಂದೆ ನೀಡಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ. ಎಸ್.ಎಸ್.ಜಿ ವಕೀಲರಿಂದಃ**

ನನ್ನ ತಂದೆ ಸಾಕ್ಷಿ ಹೇಳುವಾಗ ನಾನು ನ್ಯಾಯಾಲಯದ ಬಾಗಿಲಿನಲ್ಲಿ ನಿಂತು ಕೇಳಿಸಿಕೊಳ್ಳುತ್ತಿದ್ದೆ ಎಂದರೆ ಸರಿ. ನಾನು 4ನೇ ತರಗತಿ ಓದಿದ್ದೇನೆ. ನಿಪಿ–2(ಎ) ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಹಾಕಿದ್ದೇನೆ ಎಂದರೆ ಸರಿ. ನಿಪಿ–2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಘಟನೆ ನಡೆಯಿತು ಎನ್ನುವ 15 ದಿನಗಳ ನಂತರ ನಿಪಿ–2ಕ್ಕೆ ಸಹಿ ಹಾಕಿದ್ದೇನೆ. ನಾನು ಮರುದಿನ ನಿಪಿ–2ಕ್ಕೆ ಸಹಿ ಹಾಕಿದ್ದೇನೆ ಎಂದು ಅದರಲ್ಲಿ ಬರೆದಿದೆ ಎಂದರೆ ಆ ದಿನ ಸಹಿ ಹಾಕಿಲ್ಲ. ನಾನು ಅಲ್ಲದೇ ಬೇರೆ ಯಾರು ಸಹಿ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಸರ್ವೆ ನಂ. 131. ನಮ್ಮ ಆಸ್ತಿಯ ಬಗ್ಗೆ ಪೊಲಿಸರಿಗೆ ದಾಖಲೆ ಕೊಟ್ಟಿಲ್ಲ. ಪೋಲಿಸರು ನಮ್ಮಿಂದ ದಾಖಲೆ ಪಡೆದುಕೊಂಡಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನನಗಾಗಲೀ ನನ್ನ ತಂದೆಗಾಗಲೀ ತಾತನಿಗಾಗಲೀ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ನಮಗಾಗಲೀ ನಮ್ಮ ಆಸ್ತಿಗಾಗಲೀ ತೊಂದರೆಯಾದರೆ ದಾಖಲೆ ಪೋಲಿಸರಿಗೆ ಕೊಡುತ್ತೇವೆ ಎಂದರೆ ಸರಿ.

ಆ ದಿನ ನಾನು ಗಾಡಿ ಓಡಿಸಲು ಹೋಗಿದ್ದೆ. ಸಂಜೆ 4–30 ಸರ್ಕಲ್ ಗೆ ಬಂದೆ. ನಾನು ಹೊಳೆಕಡೆಯಿಂದ ಬರುತ್ತಿದೆ. ದಿಃ 03.07.2023 ರಂದು ಸಂಜೆ 4–30 ಗಂಟೆಗೆ ನಾನು ಕಲ್ಲುಣಿಕೆ ಸರ್ಕಲ್ ಗೆ ಬಂದಿಲ್ಲ ಮತ್ತು ಆರೋಪಿತರು ನನಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಜಮೀನು ಇಲ್ಲದೇ ಇರುವ ಕಾರಣ ಮಣ್ಣು

ತುಂಬುವ ವಿಚಾರ ಅಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ನಮಗೂ ಯಾವುದೇ ದ್ವೇಷ ಇಲ್ಲ. ನಾನು ದ್ವಿಚಕ್ರ ವಾಹನ ಚಲಾಯಿಸುತ್ತೇನೆ. ನಾನು ವೃತ್ತಿಯಲ್ಲಿ ಚಾಲಕ. ವ್ಯವಸಾಯ ಮಾಡುವುದಿಲ್ಲ ಎಂದರೆ ಮಾಡುತ್ತೇನೆ. ಅದಕ್ಕೆ ದಾಖಲೆ ಕೊಟ್ಟಿದ್ದಿರಾ ಎಂದರೆ ಇಲ್ಲ. ನಾನು ಕೆಲಸ ಮುಗಿಸಿಕೊಂಡು ರಾತ್ರಿ ಚೆನ್ನಾಗಿ ನಿದ್ರೆ ಮಾಡಬೇಕೆಂದು ಮದ್ಯ ಸೇವನೆ ಮಾಡಿಕೂಂಡು ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದಾಗ ಸ್ವತಃ ಬಿದ್ದೆ ಎಂದರೆ ಸರಿಯಲ್ಲ. ಆ ರೀತಿ ಬಿದ್ದು ಆದ ಗಾಯವನ್ನು ಉಪಯೋಗಿಸಿಕೊಂಡು ನಾನು ಚಾಸಾ–1 ಮತ್ತು 3 ರವರು ಆರೋಪಿತರು  ಹಲ್ಲೆ ಮಾಡಿದ್ದಾರೆ ಎಂಬುದಾಗಿ ಸುಳ್ಳು ದೂರನ್ನು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು ವೈದ್ಯರ ಮುಂದೆ ಹೇಳಿಕೆ ಕೊಟ್ಟಿಲ್ಲ. ನನ್ನನ್ನು ಆಸ್ಪತ್ರೆಗೆ ಪೋಲಿಸರು ಕರೆದುಕೊಂಡು ಹೋದರು. ನನ್ನನ್ನು ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದರು ಎಂದು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ಗಾಯಕ್ಕೆ ಕಾರಣೀಕರ್ತರು ಯಾರು ಎಂದು ನಾನು ವೈದ್ಯರ ಬಳಿ ಹೇಳಿಲ್ಲ ಎಂದರೆ ಹೇಳಿದ್ದೇನೆ. ನಾನು ಹೇಳಿದವರ ಹೆಸರನ್ನು ವೈದ್ಯರು ಬರೆದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಮಹಜರು ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ತೆಗೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ. ಯಾವ ಜಾತಿಯ ಕಲ್ಲು ಎಂದು ಗೊತ್ತಿಲ್ಲ. ಮು.ಮಾ–1 ರ ಕಲ್ಲನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಮು.ಮಾ–1 ರ ಮೇಲೆ ಗುರುತು ಮಾಡಿದ್ದಾರೆಯೇ ಎಂದರೆ ಗೊತ್ತಿಲ್ಲ. 3ನೇ ಆರೋಪಿ ಮು.ಮಾ–1 ರ ಕಲ್ಲಿನಿಂದ ನನನಗೆ ಹೊಡೆದಿಲ್ಲ, 2ನೇ ಆರೋಪಿ ಕೈಯಿಂದ ಗುದ್ದಿಲ್ಲ ಮತ್ತು 1ನೇ ಆರೋಪಿ ನನ್ನನ್ನು ತಬ್ಬಿಹಿಡಿದು ಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಗಲಾಟೆ ನಡೆಯದೇ ಇರುವ ಕಾರಣ ಯಾರು ಕೂಡ ಗಲಾಟೆ ಬಿಡಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಅವರ ಹೆಸರು ನನಗೆ ಗೊತ್ತಿಲ್ಲ ಎಂದರೆ ತುಂಬಾ ಜನರಿದ್ದ ಕಾರಣ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.